# ಪವನ್-ಪುನೀತ್ ಕಾಂಬಿನೇಷನ್



‘ಲೈಫು ಇಷ್ಟೇನೆ’, ‘ಲೂಸಿಯಾ’, ‘ಯೂ ಟರ್ನ್’ ಹೀಗೆ ಸರಣಿ ಹಿಟ್ ಸಿನಿಮಾಗಳನ್ನು ಕೊಟ್ಟಿರುವ ಪವನ್ ಕುಮಾರ್ ಕಳೆದ ನಾಲ್ಕೈದು ವರ್ಷಗಳಿಂದ ಕನ್ನಡ ಸಿನಿಮಾ ನಿರ್ದೇಶನ ಮಾಡಿರಲಿಲ್ಲ. ಈ ನಡುವೆ, ಒಂದು ಸಿನಿಮಾ ನಿರ್ಮಾಪಕರಾಗಿ, ಚಿತ್ರ ಅಧ್ಯಯನದ ತಂಡ ಕಟ್ಟಿ, ವೆಬ್‌ಸಿರೀಸ್ ನಿರ್ದೇಶನ ಮಾಡುತ್ತ ಅವರು ಬ್ಯುಸಿಯಾಗಿದ್ದರು. ಈಗ ಮತ್ತೆ ಪವನ್, ಕನ್ನಡ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳಲು ಸಜ್ಜಾಗಿದ್ದಾರೆ.



ಚಿತ್ರಕಥೆಯನ್ನೇ ನೆಚ್ಚಿ ಸಿನಿಮಾ ಮಾಡುವ ಪವನ್‌ಕುಮಾರ್ ಅವರ ಶೈಲಿ ಸ್ಟಾರ್ ನಟರ ಜಾಯಮಾನಕ್ಕೆ ಹೊಂದುವಂಥದ್ದಲ್ಲ. ಆದರೆ ಈ ಸಲ ಅವರೊಂದು ಅಚ್ಚರಿ ಕೊಟ್ಟಿದ್ದಾರೆ. ಅದೇನೆಂದರೆ ಅವರ ಸಿನಿಮಾಗೆ ಪುನೀತ್‌ರಾಜ್‌ಕುಮಾರ್ ನಾಯಕನಟ!

ತನ್ನ ಸ್ಟಾರ್ ಇಮೇಜ್ ಚೌಕಟ್ಟಿನೊಳಗೇ ಪ್ರಯೋಗಗಳನ್ನು ಮಾಡುವ ಹಂಬಲವೂ, ಅದರ ಕುರಿತು ಒಳಗೊಳಗೇ ಅಂಜಿಕೆಯೂ ಇರುವಂತೆ ತೋರುವ ಪುನೀತ್ ಮತ್ತು ಪವನ್ ಕಾಂಬಿನೇಷನ್ ಸಿನಿಮಾ ಹೇಗಿರಬಹುದು ಎಂಬ ಕುತೂಹಲ ಗಾಂಧಿನಗರದಲ್ಲಿ ಹೆಚ್ಚಿದೆ. ಈ ಚಿತ್ರಕ್ಕೆ ಹೊಂಬಾಳೆ ಫಿಲ್ಮ್ಸ್ ಹಣ ಹೂಡುತ್ತಿರುವುದು ಇನ್ನೊಂದು ವಿಶೇಷ.

ಸದ್ಯಕ್ಕೆ ಪುನೀತ್ ‘ಜೇಮ್ಸ್’ ಚಿತ್ರದಲ್ಲಿ ಬ್ಯುಸಿಯಾಗಿದ್ದಾರೆ. ಈ ನಡುವೆ ಅವರು ದಿನಕರ್ ತೂಗುದೀಪ ಅವರ ನಿರ್ದೇಶನದ ಸಿನಿಮಾಗೂ ಸಹಿ ಹಾಕಿರುವ ಸುದ್ದಿ ಇದೆ. ಅದಾದ ಮೇಲೆ ಪವನ್ ಕುಮಾರ್ ಸಿನಿಮಾ ಶುರುವಾಗಬಹುದು. ಹಾಗಾಗಿ ಈ ವಿಶಿಷ್ಟ ಕಾಂಬಿನೇಷನ್‌ನ ಸಿನಿಮಾ ಹೇಗಿರುತ್ತದೆ ಎಂಬುದನ್ನು ನೋಡಲು ಇನ್ನೊಂದು ವರ್ಷವಂತೂ ಕಾಯಲೇಬೇಕು. ■



# ‘ಮ್ಯೂಟ್’ನಲ್ಲಿ ಕ್ಯೂಟ್ ಅರ್ಚನಾ!

‘ಕೆಜಿಎಫ್’ ಸಿನಿಮಾದಿಂದ ಪ್ರಭೆಗೆ ಬಂದ ಪ್ರತಿಭೆಗಳಲ್ಲಿ ಅರ್ಚನಾ ಜೋಯಿಸ್ ಕೂಡ ಒಬ್ಬರು. ಕೆಜಿಎಫ್ ಸಿನಿಮಾದಲ್ಲಿ ಅವರು ನಿರ್ವಹಿಸಿದ ಅಮ್ಮನ ಪಾತ್ರ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿತ್ತು. ಆ ಸಿನಿಮಾ ನಂತರ ಅವರು ಎಲ್ಲಿ ಹೋದರು ಎಂದು ಪತ್ತೆಯಿರಲಿಲ್ಲ. ಈಗ ‘ಮ್ಯೂಟ್’ ಸಿನಿಮದ ಕ್ಯೂಟ್ ಪಾತ್ರದ ಮೂಲಕ ಮತ್ತೆ ತೆರೆಯ ಮೇಲೆ ಮಿಂಚಲು ಸಜ್ಜಾಗಿದ್ದಾರೆ ಅರ್ಚನಾ.

ಜಿ. ಗಂಗಾಧರ್ ಅವರು ನಿರ್ಮಿಸುತ್ತಿರುವ ’ಮ್ಯೂಟ್’ ಸಿನಿಮಾಕ್ಕೆ ಆ್ಯಕ್ಷನ್ ಕಟ್ ಹೇಳಿರುವುದು ಪ್ರಶಾಂತ್ ಚಂದ್ರ. ನಿರ್ದೇಶಕ ಶಶಾಂಕ್ ಅವರ ಜೊತೆಗೆ ಕೆಲಸ ಮಾಡಿದ್ದ ಪ್ರಶಾಂತ್ ಈ ಸಿನಿಮಾದ ಮೂಲಕ ಸ್ವತಂತ್ರ ನಿರ್ದೇಶಕನಾಗಿ ಗುರ್ತಿಸಿಕೊಳ್ಳುತ್ತಿದ್ದಾರೆ.



ಪ್ರಶಾಂತ್ ಚಂದ್ರ

ಚಿತ್ರದ ಚಿತ್ರೀಕರಣ ಈಗಾಗಲೇ ಮುಕ್ತಾಯಗೊಂಡಿದ್ದು, ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಶೀರ್ಷಿಕೆಯನ್ನು ಇತ್ತೀಚೆಗೆ ನಟ ರಿಷಿ ಬಿಡುಗಡೆ ಮಾಡಿದ್ದಾರೆ. ಸಿದ್ಧಾರ್ಥ ಮಾಧ್ಯಮಿಕ ಅವರೂ ಈ ಚಿತ್ರದ ಮುಖ್ಯ ಪಾತ್ರವೊಂದರಲ್ಲಿ ನಟಿಸುತ್ತಿದ್ದಾರೆ. ಸಸ್ಪೆನ್ಸ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಸಿನಿಮಾ ಎಳೆಯ ಕುರಿತು ಚಿತ್ರತಂಡ ಯಾವುದೇ ಸುಳಿವು ನೀಡುವುದಿಲ್ಲ. ‘ಥ್ರಿಲ್ಲರ್ ಸಿನಿಮಾಗಳ ಸಾಲಿನಲ್ಲಿ ನಮ್ಮ ಸಿನಿಮಾ ಒಂದು ಮೈಲಿಗಲ್ಲು ಆಗುವುದರಲ್ಲಿ ಯಾವುದೇ ಸಂಶಯ ಇಲ್ಲ’ ಎನ್ನುವ ವಿಶ್ವಾಸದಲ್ಲಿ ನಿರ್ದೇಶಕರಿದ್ದಾರೆ. ■